# ಸಂಜೆ ವಿಶೇಷ ದಂತ ಚಿಕಿತ್ಸಾಲಯ ಪ್ರಾರಂಭ

**ಚಿತ್ರದುರ್ಗ, ಜೂ. 20:** ನಗರದ ಎಸ್.ಜೆ.ಎಂ. ದಂತ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯಲ್ಲಿ ಸಾರ್ವಜನಿಕರ ಚಿಕಿತ್ಸೆಗಾಗಿ ಸಂಜೆ ವಿಶೇಷ ದಂತ ಚಿಕಿತ್ಸಾಲಯಕ್ಕೆ ಚಾಲನೆ ನೀಡಲಾಯಿತು.

ಡಾ. ಶ್ರೀ ಶಿವಮೂರ್ತಿ ಮುರುಘಾ ಶರಣರು ಹಾಗು ಶಾಸಕ ಜಿ.ಹೆಚ್. ತಿಪ್ಪಾರೆಡ್ಡಿ ಚಿಕಿತ್ಸಾಲಯವನ್ನು ಉದ್ಘಾಟಿಸಿದರು. ಎಸ್.ಜೆ.ಎಂ. ವಿದ್ಯಾಪೀಠದ ಜಂಟಿ ಕಾರ್ಯದರ್ಶಿ ಎ.ಜೆ. ಪರಮಶಿವಯ್ಯ, ಎಸ್.ಜೆ.ಎಂ. ವಿಶ್ವವಿದ್ಯಾಲಯದ ಕುಲಪತಿ ಡಾ. ಎಸ್. ಮೋಹನ್‌ಕುಮಾರ್, ರಿಜಿಸ್ಟ್ರಾರ್ ಡಾ. ಜೀತೇಂದರ್‌ಸಿಂಗ್ ಶೆಖಾವತ್, ಆಡಳಿತ ಮಂಡಳಿಯ ಸದಸ್ಯರಾದ ಎಂ.ಟಿ. ಮಲ್ಲಿಕಾರ್ಜುನಸ್ವಾಮಿ, ಕೆಇಬಿ ಷಣ್ಮುಖಪ್ಪ, ಪಟೇಲ್ ಶಿವಕುಮಾರ್, ಪ್ರಾಂಶುಪಾಲರಾದ ಡಾ|| ಗೌರಮ್ಮ, ಡಾ|| ಪ್ರಶಾಂತ್, ಡಾ|| ದಿನೇಶ್ ಎಸ್, ಡಾ. ಎಲ್. ಈಶ್ವರಪ್ಪ, ಶ್ರೀಮತಿ ಗಾಯತ್ರಿ ಶಿವರಾಂ ಮತ್ತು ಕಾಲೇಜಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

ಈ ಚಿಕಿತ್ಸಾಲಯವು ನುರಿತ ದಂತ ವೈದ್ಯರಿಂದ ಚಿಕಿತ್ಸೆ, ಅತ್ಯಾಧುನಿಕ ಸಲಕರಣೆಗಳು ಎಲ್ಲಾ ರೀತಿಯ ಎಕ್ಸ್‌ರೇ ಸೌಲಭ್ಯ ಹೊಂದಿದ್ದು, ಪ್ರತಿದಿನ ಸಂಜೆ 5 ರಿಂದ 8 ಗಂಟೆವರೆಗೆ ಕಾರ್ಯನಿರ್ವಹಿಸಲಿದೆ. ಹುಳುಕು ಹಲ್ಲಿನ ಚಿಕಿತ್ಸೆ, ರೂಟ್ ಕೆನಾಲ್ ಚಿಕಿತ್ಸೆ, ಕೃತಕ ದಂತ ಚಿಕಿತ್ಸೆ, ವಕ್ರ ದಂತ ಚಿಕಿತ್ಸೆ, ವಸಡು ರೋಗ ಚಿಕಿತ್ಸೆ, ಹಲ್ಲಿನ ಶಸ್ತ್ರಚಿಕಿತ್ಸೆ, ಇಂಪ್ಲಾಂಟ್ ದಂತ ಚಿಕಿತ್ಸೆ, ಲೇಸರ್ ದಂತ ಚಿಕಿತ್ಸೆ, ದಂತ ಬ್ಲೀಚಿಂಗ್ ಚಿಕಿತ್ಸೆ ಮತ್ತು ಮಕ್ಕಳ ದಂತ ಚಿಕಿತ್ಸೆಯನ್ನು ನೀಡಲಾಗುವುದು. ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳಲು ಕೋರಲಾಗಿದೆ.





